# ***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು***

**ಎಸ್‌ಸಿ. 110/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ರಾಮಸ್ವಾಮಿ | *ಪ್ರಮಾಣ ಮಾಡಿಸಿದ ದಿನಾಂಕಃ* | |
| **ತಂದೆ/ಗಂಡನ ಹೆಸರು** | ಃ ಶ್ರೀ ಪುಟ್ಟರಾಮಯ್ಯ | **30.06.2023** | |
| **ವಯಸ್ಸು** | ಃ 44 ವರ್ಷ | | |
| **ವೃತ್ತಿ** | ಃ ಪಿ.ಎಸ್.ಐ, ಕೆ.ಎಂ.ದೊಡ್ಡಿ | **ಪ್ರಾ.ಸಾ.** | ಃ 28 |
| **ವಾಸಸ್ಥಳ** | ಃ ಮಂಡ್ಯ | **ಚಾ.ಸಾ.** | ಃ 42 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *06.09.2016* ರಿಂದ *10.05.2018* ರ ವರೆಗೆ ಮಳವಳ್ಳಿ ಗ್ರಾಮಾಂತರ ಪೋ.ಠಾಣೆ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ *24.12.2016* ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಸಂಜೆ *5.30* ಗಂಟೆ ಸಮಯದಲ್ಲಿ ಪಿ.ಸಿ-*254* ಎಂ.ಕೆ.ನಾಗೇಂದ್ರ ಎನ್ನುವವರು ಮಾಗನೂರು ಗೇಟ್ ಬಳಿ ನಂಬರ್ ಪ್ಲೇಟ್ ಇಲ್ಲದ ಸಿಲ್ವರ್ ಸ್ಯಾಂಟ್ರೋ ಕಾರು ನಿಂತಿದೆ ಅದಕ್ಕೆ ವಾರಸುದಾರರು ಯಾರು ಇಲ್ಲ ಎಂದು ವರದಿ ನೀಡಿದ್ದರು. ಆ ವರದಿ ಸ್ವೀಕರಿಸಿ ಠಾಣಾ ಜಿ.ಎಸ್.ಸಿ ಪ್ರಕರಣ ನೊಂದಾಯಿಸಿಕೊಂಡಿದ್ದೆ. ನಂತರ ಸದರಿ ಸ್ಥಳಕ್ಕೆ ಭೇಟಿ ಕೊಟ್ಟು ಪಂಚರಾದ ಎಂ.ಪಿ.ಗೌಡ ಮತ್ತು ಮರಿಸ್ವಾಮಿ ಎನ್ನುವವರು ಕರೆಸಿಕೊಂಡು ಅವರಿಗೆ ಕಾರಿನ ಬಗ್ಗೆ ಮಾಹಿತಿ ತಿಳಿಸಿ ಸದರಿ ಕಾರನ್ನು ಅಮಾನತ್ತು ಪಡಿಸಿಕೊಳ್ಳುವ ಸಂದರ್ಭದಲ್ಲಿ ಪಂಚಾಯಿತಿದಾರರಾಗಿರುವಂತೆ ಕೋರಿಕೊಂಡಿದ್ದೇ. ಸದರಿ ಅವರ ಸಮಕ್ಷಮದಲ್ಲಿ ಕಾರನ್ನು ಪರಿಶೀಲಿಸಿದಾಗ ಕಾರಿನ ಹಿಂಭಾಗ ಮತ್ತು ಮುಂಬಾಗ ನಂಬರ್ ಪ್ಲೇಟ್ ಇರುವುದಿಲ್ಲ. ನಂತರ ಪರಿಶೀಲಿಸಿದಾಗ ಬಲಭಾಗದ ಡೋರ್ ನ ಕೆಳಗಡೆ ಭಾಗದಲ್ಲಿ ಉಜ್ಜಿದ ಗುರುತು

ಇತ್ತು ಮತ್ತು ಮುಂಭಾಗ ಬಲಚಕ್ರ ಪಂಚರ್ ಆಗಿತ್ತು. ಕಾರಿನ ಎಡಭಾಗದ ಡೋರ್ ನ ತೆಗೆದು ನೋಡಿದಾಗ ಎಡಭಾಗದ ಸೀಟಿನ ಕೆಳಗಡೆ ಫುಟ್ ಮ್ಯಾಟ್ ನಲ್ಲಿ ರಕ್ತದ ಕಲೆ ಆಗಿತ್ತು. ಚಾಲಕನ ಸೀಟ್ ನ ಹಿಂಭಾಗದಲ್ಲಿ ರಕ್ತದ ಕಲೆ ಇತ್ತು. ಕಾರಿನ ಬ್ಯಾನೆಟ್ ತೆಗೆದುನೋಡಿದಾಗ ಇಂಜಿನ್ ನಂ ಜಿಎಹೆಚ್ ಡಿ*4* ಇ *19179* ಇತ್ತು ಮತ್ತು ಚಾಸಿಸ್ ನಂ.***MALAA51HR4M532177*** ಆಗಿರುತ್ತದೆ. ನಂತರ ಆ ಕಾರನ್ನು ವಾರಸುದಾರರು ಪತ್ತೆಯಾಗಿದ ಕಾರಣ ಅಮಾನತ್ತು ಪಡಿಸಿಕೊಂಡೆವು.

*2.* ಅದೇ ದಿನ ಸಂಜೆ *6* ಗಂಟೆಯಿಂದ *6.45* ರ ವರೆಗೆ ವಿಧ್ಯುತ್ ದೀಪದ ಬೆಳಕು ಮತ್ತು ಜೇಪಿನ ಬೆಳಕಿನಲ್ಲಿ ಮಹಜರ್ ಮಾಡಿದ್ದೇವು. ಕಾರು ಪಂಚರ್ ಆಗಿದ್ದರಿಂದ ಅದನ್ನು ತರಲು ಸಿಬ್ಬಂದಿ ನೇಮಿಸಿ ಠಾಣೆಗೆ ವಾಪಸ್ಸಾಗಿ ಸದರಿ ಕಾರನ್ನು ಮಾಲುಪಟ್ಟಿ ಸಂಖ್ಯೆ *188/16* ನಮೂದಿಸಿ ಮಳವಳ್ಳಿ ಘನ ನ್ಯಾಯಾಲಯಕ್ಕೆ ಕಳುಹಿಸಿದೆ. ನಂತರ ಆ ಕಾರಿನ ಪತ್ತೆಗಾಗಿ ರಾಜ್ಯದ ಎಲ್ಲಾ ಪೋ.ಠಾಣೆ ಗೆ ಇಮೇಲ್ ಮತ್ತು ನಿಸ್ತಂತ್ ಮೂಲಕ ಸಂದೇಶ ಕಳುಹಿಸಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ಸಿ.ಪಿ.ಸಿ-*254* ಎಂ.ಕೆ.ನಾಗೇಂದ್ರ ಅವರು ಕೊಟ್ಟಿದ್ದ ವರದಿ ಇದೆ. ಸದರಿ ವರದಿಯನ್ನು ನಿ.ಪಿ-*108* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ಆ ದಿನ ನಾನು ಜಿ.ಎಸ್.ಸಿ ಪ್ರಕರಣದ ದಾಖಲೆ ಇದೆ. ಸದರಿ ವರದಿಯನ್ನು ನಿ.ಪಿ-*109* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ಆ ದಿನ ಕಾರನ್ನು ಅಮಾನತ್ತು ಮಾಡಿಕೊಂಡಾಗ ಮಾಡಿದ ಮಹಜರ್ ಇದೆ ಮತ್ತು ಅದರಲ್ಲಿರುವ ಸಹಿ ನನ್ನದೇ ಇದೆ. ಸದರಿ ದಾಖಲೆಯನ್ನು ನಿ.ಪಿ-*110* ಮತ್ತು ಸಹಿಯನ್ನು ನಿ.ಪಿ-*110(ಎ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ಪಿ.ಎಫ್ ಪ್ರತಿ ಇದ್ದು ಅದನ್ನು ನಿ.ಪಿ-*111*

ಎಂದು ಗುರುತಿಸಿದೆ. ಆ ದಿನ ಜಪ್ತಿ ಮಾಡಿದ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಈಗ ಕೋರ್ಟ್ ಆವರಣದಲ್ಲಿ ನಿಲ್ಲಿಸಿರುವ ಕಾರನ್ನು ನಾನು ನೋಡಿದ್ದು ಅದೇ ಕಾರು ನಾನು ಆ ದಿನ ಜಪ್ತಿ ಮಾಡಿದ್ದ ಕಾರು ಇರುತ್ತದೆ. ಸದರಿ ಕಾರನ್ನು ಎಂ.ಓ-*27* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ನಿ.ಪಿ-*65* ಸದರಿ ಕಾರಿನ ಫೋಟೋ ಇರುತ್ತದೆ.

**ನಿ.ಪಿ-*108* ರಿಂದ *111* ದಾಖಲೆಗಳನ್ನು ಗುರುತಿಸಲು ಆರೋಪಿತರ ವಕೀಲರು ಮೂಲ ದಾಖಲೆಯಿಲ್ಲ ತಕರಾರು ವ್ಯಕ್ತಪಡಿಸಿದ್ದು ತಕರಾರಿನ ಮೇಲೆ ಗುರುತಿಸಲಾಗಿದೆ.**

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಗಿದೆ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು